**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**
**ಸಿ.ಸಿ. ಸಂಖ್ಯೆ 376/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ರವಿ | ಡಿ.ಡಬ್ಲ್ಯೂ 2 |
| ತಂದೆಯ ಹೆಸರು | ಃ | ಬಾಬು | |
| ವಯಸ್ಸು | ಃ | 42 ವರ್ಷ | |
| ಉದ್ಯೋಗ | ಃ | ಕೂಲಿ ಕೆಲಸ | |
| ವಾಸ ಸ್ಥಳ | ಃ | ಬೀಜುವಳ್ಳಿ, ಮೂಡಿಗೆರೆ | |

ದಿನಾಂಕಃ 05.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ ಹೆಚ್.ಆರ್.ಸಿ. ವಕೀಲರಿಂದ ಆರೋಪಿಯ ಪರವಾಗಿಃ

1. ಆರೋಪಿಯು ನನಗೆ ಪರಿಚಯ ಇರುತ್ತಾರೆ. ಆರೋಪಿಯು ನಾನು ಮತ್ತು ನನ್ನ ಹೆಂಡತಿ ಮಕ್ಕಳು ಹಾಗೂ ಒಟ್ಟು 9 ಜನರನ್ನು ಮೋಹನ್ ಕುಮಾರ್ ರವರ ತೋಟಕ್ಕೆ ಕೆಲಸಕ್ಕೆ ಸೇರಿಸಿರುತ್ತಾರೆ. ನಂತರ ನಾವು ಸದರಿ ತೋಟದ ಮಾಲೀಕರ ಬಳಿ ಸಾಲ ಪಡೆದುಕೊಂಡು ನಂತರ ಸಾಲವನ್ನು ಮರುಪಾವತಿ ಮಾಡಿ ಕೆಲಸ ಬಿಟ್ಟು ಬಂದಿರುತ್ತೇವೆ. ನಂತರ ಆರೋಪಿಯಿಂದ ಮೋಹನ್ ಕುಮಾರ್ ರವರು ಒಂದು ಕರಾರು ಪತ್ರ ವನ್ನು ಬರೆಸಿಕೊಂಡು ಒಂದು ಚೆಕ್ಕನ್ನು ಪಡೆದುಕೊಂಡಿರುತ್ತಾರೆ. ಈ ಪ್ರಕರಣದಲ್ಲಿಹೇಳಿರುವ ರಂಗಸ್ವಾಮಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ.

ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ – ಆರೋಪಿತನ ಪರವಾಗಿ

2. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿನಾಂಕಃ 07.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ –

3. ನಾನು ಸುಮಾರು 18 ವರ್ಷಗಳಿಂದ ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಯಾರು ಯಾರ ತೋಟದಲ್ಲಿ ಕೆಲಸ ಮಾಡಿರುತ್ತೇನೆ ಎನ್ನುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಎನ್.ಟಿ. ಮೋಹನ್ ರವರ ತೋಟದಲ್ಲಿ ನಾನು ಕೆಲಸ ಮಾಡಿದ ಬಗ್ಗೆ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ರಂಗಸ್ವಾಮಿ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಒಂಬತ್ತು ಜನ ಕೆಲಸಗಾರರ ಹೆಸರು ಬಾಬು, ಅಪ್ಪಿ ರವೀಂದ್ರ, ಲಲಿತಾ, ಆನಂದ, ಸುನಂದ, ರವಿ, ಜಯ ಮತ್ತು ಕಾವೇರಿ ಆಗಿರುತ್ತದೆ. ನನ್ನ ಮಗಳ ಹೆಸರು ಕಾವೇರಿ ಆಗಿರುತ್ತದೆ. ಮೇಲೆ ಹೇಳಿದ ಕೆಲಸಗಾರರು ಎನ್. ಟಿ. ಮೋಹನ್ ರವರ ತೋಟದಲ್ಲಿ ಕೆಲಸ ಮಾಡಿದ ಬಗ್ಗೆ ನನ್ನ ಬಳಿ ದಾಖಲಾತಿ ಇರುವುದಿಲ್ಲ. ನಾನು ಮತ್ತು ಆರೋಪಿಯು ಅನ್ಯೋನ್ಯವಾಗಿ ಇರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವಂತೆ ಆರೋಪಿಯೇ ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆದೂರವಾಗಿವೆ ಎಂದರೆ ಸರಿಯಲ್ಲ. ನಾನು ಎನ್. ಟಿ. ಮೋಹನ್‌ರವರ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ಮೇಲೆ ಹೇಳಿದ 9 ಜನ ಕೂಲಿ ಆಳುಗಳು ಎನ್.ಟಿ. ಮೋಹನ್‌ರವರ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ಎನ್ ಟಿ ಮೋಹನ್ ರವರ ತೊಟದಲ್ಲಿ ಯಾವುದೇ ರೀತಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾಧಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ